# ಪ್ರಹಸನ ಪ್ರಸಂಗ

**ಅನೇಕರಿಗೆ** ಆಧ್ಯಾತ್ಮಿಕ ವಿಷಯದಲ್ಲಿ ಕುತೂಹಲವಿರುತ್ತದೆ, ಏನೇನೋ ವಿಚಿತ್ರ ಅನುಭವ ಶಕ್ತಿಗಳನ್ನು ಪಡೆಯುವ ಉತ್ಸಾಹವಿರುತ್ತದೆಯೇ ಹೊರತು ನಿಜವಾದ ಆಧ್ಯಾತ್ಮಿಕ ಪ್ರಗತಿಯಲ್ಲಿ ಆಸಕ್ತಿಯಿರುವುದಿಲ್ಲ. ಇಂತಹ ವ್ಯಕ್ತಿಯೊಬ್ಬನು ಒಬ್ಬ ಧಾರ್ಮಿಕ ಗುರುಗಳ ಹತ್ತಿರ ಹೋಗಿ ಕೇಳುತ್ತಾನೆ. 'ಸ್ವಾಮಿ, ನನಗೆ ಏನಾದರೂ ಅನುಭವವನ್ನು ಕೊಡಿ' ಎಂದು.

ಅನುಭವ ಪಡೆಯುವುದು ಅಷ್ಟು ಸುಲಭವಲ್ಲ, ತುಂಬ ಸಾಧನೆ ಬೇಕು ಎಂದು ಗುರುಗಳು ಹೇಳಿದರು. ಆದರೆ ಆ ವ್ಯಕ್ತಿಗೆ ದಿಢೀರ್ ಅನುಭವ ಬೇಕಿತ್ತು, ಕಾಯುವ ತಾಳ್ಮೆ ಇರಲಿಲ್ಲ. ಆಗ ಗುರುಗಳು ಅವನಿಗೆ ಹೇಳಿದರು :

'ನೋಡು, ಒಂದು ದಿನ ಬೆಳಗ್ಗೆ ಮಳೆ ಬರುತ್ತಿರುವಾಗ ಬಯಲಿನಲ್ಲಿ ಇಡೀ ದಿನ ನಿಂತುಕೊಂಡಿರಬೇಕು. ಧಾರಾಕಾರವಾಗಿ ಮಳೆ ನಿನ್ನ ಮೈಮೇಲೆ ಸುರಿಯಬೇಕು.'

ಆಗಲಿ ಎಂದು ಆತ ಹೊರಟುಹೋದನು. ಗುರುಗಳ ಉಪದೇಶವನ್ನು ಚಾಚೂತಪ್ಪದೆ ಅನುಸರಿಸಿದ. ಮಳೆಯಲ್ಲಿ ತೊಯ್ದು ಅವನು ಚಳಿಯಲ್ಲಿ ನಡುಗುತ್ತಿದ್ದನು. ಇಡೀ ದಿನ ಅನ್ನ ನೀರು ಇಲ್ಲದೆ ನಿಂತು ಅವನು ಸುಸ್ತಾದನು. ಮಾರನೆಯ ದಿನ ತನಗಾದ ಅನುಭವವನ್ನು ಹೇಳಲು ಗುರುಗಳ ಹತ್ತಿರ ಹೋದನು. ಗುರುಗಳು 'ನಿನಗೆ ಹೇಗೆ ಅನಿಸಿತು?' ಎಂದು ಕೇಳಿದರು.

'ನಾನೆಂಥ ಮೂರ್ಖ. ಎಂದು ಭಾವಿಸಿದೆ' ಎಂದು ಅವನು ಹೇಳಿದ.

'ಸದ್ಯಕ್ಕೆ ಆ ಅನುಭವವೇ ನಿನಗೆ ಸಾಕು'ಎಂದರು ಗುರುಗಳು.

❊ ❊ ❊ ❊

**ದೇವರು** ಸರ್ವವ್ಯಾಪಿಯಾದರೂ ಅವನನ್ನು ಒಂದು ಪ್ರದೇಶಕ್ಕೆ, ವಸ್ತುವಿಗೆ, ಅಥವಾ ವ್ಯಕ್ತಿಗೆ ಸೀಮಿತಗೊಳಿಸುತ್ತೇವೆ. ನಮ್ಮ ಸೀಮಿತ ಮನೋಭಾವಕ್ಕನುಗುಣವಾಗಿ ಅವನಿಗೆ ಸೀಮೆಯನ್ನು ಕಲ್ಪಿಸುತ್ತೇವೆ. ಅಜ್ಞಾನದ ಅಮಲಿನಲ್ಲಿರುವ ನಮಗೆ ನಮ್ಮ ತಪ್ಪಿನ ಅರಿವೇ ಉಂಟಾಗುವುದಿಲ್ಲ.

ಒಂದು ಭಾನುವಾರ ಕುಡುಕನೊಬ್ಬನು ಒಂದು ನದಿಯ ತೀರದಲ್ಲಿ ನಿಂತಿರುತ್ತಾನೆ. ಅಲ್ಲಿಯೇ ಪಾದ್ರಿಯೊಬ್ಬನೂ ಇರುತ್ತಾನೆ. ಅವನನ್ನು ಕಂಡ ಕುಡುಕನಿಗೆ ಧಾರ್ಮಿಕ ದೀಕ್ಷೆಯನ್ನು ಪಡೆಯುವ (*Baptism*) ಆಸೆಯಾಗುತ್ತದೆ. ಪಾದ್ರಿ ದೀಕ್ಷೆ ನೀಡಲು ಒಪ್ಪಿ ಅವನನ್ನು ನದಿಗೆ ಕರೆಯುತ್ತಾನೆ—ಆ ಪುಣ್ಯ ನದಿಯ ನೀರನ್ನು ಪ್ರೋಕ್ಷಿಸಿ ಅವನಿಗೆ ದೀಕ್ಷೆ ನೀಡುವುದಕ್ಕಾಗಿ. ಈಗ ಇಬ್ಬರೂ ನೀರಿನಲ್ಲಿ ನಿಂತಿದ್ದಾರೆ.

'ಯೇಸುವನ್ನು ಕಂಡುಹಿಡಿಯಲು ನೀನು ಸಿದ್ಧನೇ?' ಎಂದು ಪಾದ್ರಿ ಕೇಳಿದ.

'ಹೌದು ಸ್ವಾಮಿ, ಸಿದ್ಧ.'

ಆಗ ಪಾದ್ರಿಯು ಅವನನ್ನು ನೀರಿನಲ್ಲಿ ಮುಳುಗಿಸಿ ಮತ್ತೆ ಮೇಲಕ್ಕೆತ್ತಿ ಕೇಳಿದ : 'ಯೇಸು ಸಿಕ್ಕಿದನೆ?'

'ಇಲ್ಲ ಸಿಗಲಿಲ್ಲ,' ಕುಡುಕ ಹೇಳಿದ.

ಪಾದ್ರಿಯು ಅವನನ್ನು ನೀರಿನಲ್ಲಿ ಮುಳುಗಿಸಿ, ಸ್ವಲ್ಪ ಹೊತ್ತು ಹಾಗೆಯೇ ಹಿಡಿದುಕೊಂಡು ಮತ್ತೆ ಮೇಲಕ್ಕೆತ್ತಿ ಕೇಳಿದ : 'ಈಗ ಸಿಕ್ಕಿದನೆ?'

'ಇಲ್ಲ ಸ್ವಾಮಿ, ಸಿಕ್ಕಲಿಲ್ಲ' ಎಂದು ಏದುಸಿರು ಬಿಡುತ್ತ ಹೇಳಿದ ಕುಡುಕ.

ಪಾದ್ರಿಯು ಬೇಸರದಿಂದ ಅವನನ್ನು ಮತ್ತೆ ನೀರಿನಲ್ಲಿ ಮುಳುಗಿಸಿದ. ಈಗ ಅವನನ್ನು ಮೂವತ್ತು ಸೆಕೆಂಡುಗಳು ನೀರಿನಲ್ಲಿಯೇ ಹಿಡಿದಿರಿಸಿ, ಅನಂತರ ಮೇಲಕ್ಕೆತ್ತಿ ಕೇಳಿದ:

'ಏನಯ್ಯ, ಇನ್ನೂ ದೇವರ ಕೃಪೆಯಾಗಲಿಲ್ಲವೆ, ಯೇಸು ಸಿಗಲಿಲ್ಲವೇ?'

ಕುಡುಕನು ತನ್ನ ಕಣ್ಣುಗಳನ್ನು ಒರೆಸಿಕೊಳ್ಳುತ್ತ ಕೇಳಿದ: **'ಯೇಸುವು ಇಲ್ಲಿಯೇ ಮುಳುಗಿರುವುದು ಖಂಡಿತವೇ?'**

❊ ❊ ❊ ❊

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಏಪ್ರಿಲ್ 2001**

| | | |
|---|---|---|
| 2 | ಸೋಮವಾರ | ಶ್ರೀರಾಮ ನವಮಿ |
| 22 | ಭಾನುವಾರ | ಆಧ್ಯಾತ್ಮಿಕ ಶಿಬಿರ |
| | (ಮಧ್ಯಾಹ್ನ ೩.೦೦ರಿಂದ ೭.೦೦ರವರೆಗೆ) | |
| 26 | ಗುರುವಾರ | ಶ್ರೀ ಬಸವ ಜಯಂತಿ |
| 28 | ಶನಿವಾರ | ಶ್ರೀ ಶಂಕರ ಜಯಂತಿ |
| 28 | ಶನಿವಾರ | ಶ್ರೀ ರಾಮಾನುಜ ಜಯಂತಿ |

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

**ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ**